# ಆಟಕ್ಕೂ ಜೈ; ಔಷಧಕ್ಕೂ ಸೈ ಗಜ್ಜುಗೆ ಕಾಯಿ



ಎಲ್ಲರಿಗೂ ಅವರ ಬಾಲ್ಯದ ಜೀವನವನ್ನು ಮರೆಯಲು ಅಸಾಧ್ಯ. ಆ ವಯಸ್ಸಿನಲ್ಲಿ ಇದ್ದ ಆ ಮುಗ್ಧತೆ, ಖುಷಿ, ನೆಮ್ಮದಿ, ಆ ಸುಂದರ ಮುಗ್ಧನಗು, ತುಂಟತನ, ಹಠ ಎಲ್ಲವೂ ಚೆಂದ. ರಜಾದಿನಗಳಲ್ಲಿ ಆಡಿದ ಆಟಗಳು, ಕಲಿತ ಪಾಠ, ಬಿದ್ದ ಏಟು, ಸ್ನೇಹಿತರ ಜೊತೆಯಲ್ಲಿ ಆಡಿದ ಗೋಲಿ ಆಟ, ಎಲ್ಲವೂ ಸವಿನೆನಪುಗಳ ಸರಮಾಲೆ ಸೃಷ್ಟಿಸುತ್ತವೆ. ಬಾಲ್ಯದಲ್ಲಿ ಹೆಚ್ಚು ಚಾಲ್ತಿಯಲ್ಲಿದ್ದ ಆಟಗಳೆಂದರೆ ಗೋಲಿ, ಲಗೋರಿ, ಮರಕೋತಿ, ಹುಲಿ ದನ, ಕೆರೆದಂಡೆ, ಕಣ್ಣಾಮುಚ್ಚೆ ಕಾಡೆಗೂಡೆ... ಎಲ್ಲಕ್ಕಿಂತ ಹೆಚ್ಚಾಗಿ ಹುಡುಗರು ಆಡುತ್ತಿದ್ದುದು ಗೋಲಿ.



ಗೋಲಿಯ ಆಕಾರವನ್ನೇ ಹೋಲುವ ಗಜ್ಜುಗೆ ಕಾಯಿ ಗೋಲಿ ಆಟಕ್ಕೆ ಪರ್ಯಾಯ ಸಾಧನ. ಮಕ್ಕಳಿಗೆ ಆಟವಾಡಲು ಇದು ಸೂಕ್ತವಾದರೂ ಈಗ ಗಜ್ಜುಗೆ ಕಾಯಿ ಕೂಡ ಅಳಿವಿನ ಅಂಚಿನಲ್ಲಿದೆ.

## ಔಷಧೀಯ ಗುಣ

ಈ ಸಸ್ಯವು ವ್ಯಾಪಕವಾಗಿ ಹರಡುತ್ತದೆ. ಇದರ ಕಾಂಡಗಳು ಮರದ ರೀತಿಯ ಬಳ್ಳಿಯ ಹಾಗೆ ಆವರಿಸಿಕೊಳ್ಳುತ್ತವೆ. ಸಸ್ಯಗಳ ಮೇಲ್ಮೈ ಕೊಕ್ಕೆಯಂತೆ ತೀಕ್ಷ್ಣವಾದ ಹಳದಿ ಮುಳ್ಳುಗಳನ್ನು ಹೊಂದಿವೆ. ಸಸ್ಯದ ಪ್ರತಿ ಎಲೆಯೂ 6–8 ಪಿನ್ನೆಗಳನ್ನು ಹೊಂದಿದೆ. ಮೇಲ್ಭಾಗದಲ್ಲಿ ದಟ್ಟವಾದ ಮೃದು ತುಪ್ಪಳದಿಂದ ಕೂಡಿರುತ್ತದೆ. ಹಳದಿ ಬಣ್ಣದ ಹಣ್ಣುಗಳು ಸರಿಸುಮಾರು 8 ಸೆಂಟಿಮೀಟರ್‌ನಷ್ಟು ಉದ್ದವಿರುತ್ತದೆ. ಹಣ್ಣಿನ ಮೇಲ್ಭಾಗದಲ್ಲಿ ಮೃದುವಾದ ಮುಳ್ಳುಗಳು ಕೂಡಿದ್ದು ಒಂದು ಹಣ್ಣಿನ ಒಳಗೆ 1ರಿಂದ 2 ಬೂದು ಬಣ್ಣದ ಬೀಜವಿರುತ್ತದೆ ಎಂದು ಸಸ್ಯದ ಬಗ್ಗೆ ಮಾಹಿತಿ ನೀಡುತ್ತಾರೆ ಮೈಸೂರು ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಡಾ. ಮಹದೇವಕುಮಾರ್.

ಆಟದ ಗೋಲಿಯಂತಿರುವ ಗಜ್ಜುಗೆ ಕಾಯಿ ಬಹಳ ಮಹತ್ವವಾದ ಗಿಡ. ಇದು ಆಯುರ್ವೇದ ಔಷಧಕ್ಕೆ ಬಳಕೆಯಾಗುತ್ತದೆ. ಗಿಡದ ಸಸ್ಯಶಾಸ್ತ್ರೀಯ ಹೆಸರು ಸಿಸಾಲ್ಪಿನಿಯಾ ಬೊಂಡಕ್. ಇದು ಫಾಬೇಸಿಯೇ ಕುಟುಂಬಕ್ಕೆ ಸೇರಿದೆ. ಸಾಮಾನ್ಯವಾಗಿ ಈ ಸಸ್ಯವನ್ನು ಬಾಂಡಕ್ ನಟ್, ಫೀವರ್ ನಟ್ ಎಂದು ಕರೆಯುತ್ತಾರೆ. ಈ ಸಸ್ಯವನ್ನು ಸಂಸ್ಕೃತದಲ್ಲಿ ಲತಾ ಕಾರಂಜ, ಹಿಂದಿಯಲ್ಲಿ ಕತ್ಯಾರಂಜ್ ಮತ್ತು ಕತ್ಕಲಿಜಿ ಎಂದು ಕನ್ನಡದಲ್ಲಿ ಗಜ್ಜುಗ, ಗಜಗ, ಹೆಗ್ಗೆಜ್ಜುಗ, ಗೆಜೆಗೆ ಎಂದು ಕರೆಯುವುದುಂಟು.

ಉತ್ತಮ ಔಷಧೀಯ ಗುಣಗಳನ್ನು ಹೊಂದಿರುವ ಗಜ್ಜುಗೆ ಬೀಜಗಳನ್ನು ವಾಂತಿ, ಜ್ವರ, ಕುಷ್ಠರೋಗ, ರಕ್ತಸಂಬಂಧಿ ಕಾಯಿಲೆ, ಚರ್ಮ ಸಂಬಂಧಿ ಕಾಯಿಲೆ, ಮಲೇರಿಯಾ, ಜಂತು ಹುಳುಗಳನ್ನು ನಿವಾರಿಸಲು, ಮೂತ್ರಪಿಂಡದ ತೊಂದರೆಗೆ ಕಷಾಯ ಮಾಡಿ ಉಪಚರಿಸುತ್ತಾರೆ. ಕುಷ್ಠರೋಗಿಗಳ ರಕ್ತಸ್ರಾವವನ್ನು ಹಣ್ಣಿನ ಕಷಾಯದಿಂದ ಗುಣಪಡಿಸುತ್ತಾರೆ.

■ ಎಂ.ಆರ್. ಮಂಜುನಾಥ್

